ಸಿಸಿ ನಂಃ 4102/2023
ಸಿ.ಡಬ್ಲೂ 6
ಪಿ.ಡಬ್ಲೂ 5

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಚಿದನಂದ |
| ತಂದೆಯ ಹೆಸರು | ಃ | ನಾಗಪ್ಪ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಪಿ ಎಸ್ ಐ |
| ವಾಸ ಸ್ಥಳ | ಃ | ಕಲಘಟಗಿ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **17-11-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ದಿನಾಂಕಃ 18-08-2021 ರಿಂದ ದಿನಾಂಕಃ 11-10-2023 ರವರೆಗೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 20-09-2022 ರಂದು ಠಾಣೆಯಲ್ಲಿರುವಾಗ ಚಾಸಾ.1 ರವರು ಠಾಣೆಗೆ ಬಂದು ಒಂದಿದು ಆಟೋ ದಲ್ಲಿ ಅಕ್ರಮವಾಗಿ ರೇಷನ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದೆ ಎಂದು ತಿಳಿಸಿದ್ದು ನಂತರ ಸಿಬ್ಬಂದಿಯನ್ನು ಕಳುಹಿಸಿಕೋಡಬೇಕು ಎಂದು ಕೇಳಿದಾಗ ನಂತರ ನನ್ನ ಮೇಲಾಧಿಕಾರಿಗಳು ನನ್ನ ಮತ್ತು ಚಾಸಾ.7 ರವರನ್ನು ಕಳುಹಿಸಿಕೊಟ್ಟಿರುತ್ತಾರೆ. ನಂತರ ನಾನು ಎರಡು ಜನ ಪಂಚರನ್ನು ಕರೆದುಕೊಂಡು ಖಾಸಗಿ ವಾಹನದಲ್ಲಿ ಎರಿಕೊಪ್ಪ ಗ್ರಾಮದ

ಸಿಸಿ ನಂಃ 4102/2023
ಸಿ.ಡಬ್ಲೂ 6
ಪಿ.ಡಬ್ಲೂ 5

ಟೋಲ ಗೇಟ ಹತ್ತಿರ ಹೋಗಿ ನಾಹಿ ಪಂಚರು ಚಾಸಾ.1 ರವರು ಅಲ್ಲಿ ನಿಂತಿರುವಾಗ ಧಾರವಾಗಡ ಕಡೆಯಿಂದ ಒಂದು ಆಟೋ ರಿಕ್ಷಾ ಟೋಲ ಗೇಟ ಬರುವಾಗ ನಮ್ಮನ್ನು ನೋಡಿ ಎರಿಕೊಪ್ಪ ಬ್ರಿಡ್ಜ ಇಂದ ತಿರುವು ತೆಗೆದುಕೊಂಡು ಎರಿಕೊಪ್ಪ ಗ್ರಾಮಕ್ಕೆ ಹೋಗಿರುತ್ತಾರೆ ಹೋಗುವುದನ್ನು ನೋಡಿ ನಾವು ಅವರನ್ನು ಬೆನ್ನಟ್ಟಿ ಹೋದಾಗ ಸದರಿ ಆಟೋ ಜೋರಾಗಿ ಪಂಚಾಯಿತಿ ಹಿಂದೆ ಇರುವ ಅಂಗವಾಡಿ ಕೇಂದ್ರ್ರದ ಹತ್ತಿರ ಹೋಗಿ ಹಿಡಿದಿರುತ್ತೇವೆ. ಆಗ ಚಾಸಾ.1 ರವರು ಆ ಚಾಲಕನನ್ನು ಆಟೋದಲ್ಲಿ ಏನಿಗೆ ಎಂದು ವಿಚಾರಿಸಿದಾಗ ಆಗ ಧಾರವಾಡದ ಸಂತೆಯಲ್ಲಿ ಗ್ರಾಮಸ್ಥರು ಕಡೆಯಿಂದ ಅಕ್ಕಿಯನ್ನು ಕಡಿಮೆ ಬೆಲೆಗೆ ತೆಗೆದುಕೊಂಡು ಹುಬ್ಬಳ್ಳಿಗೆ ಹೋಗಿ 2 ನೇ ಆರೋಪಿಯ ಗುಡಾವನದಲ್ಲಿ ಇಟ್ಟು ಹೆಚ್ಚಿನ ಬೆಲೆಗೆ ಕಾಳು ಸಂತೆಯಲ್ಲಿ ಮಾರಾಟ ಮಾಡುತ್ತಿದ್ದೆವೆ ಎಂದು ತಿಳಿಸಿದ್ದರು ಈ ಬಗ್ಗೆ ಪಾಸ ಹಾಗೂ ಪರ್ಮಿಟ ಇದೆ ಎಂದು ಚಾಸಾ.1 ರವರು ಕೇಳಿದಾಗ ಆ ವ್ಯಕ್ತಿ ಯಾವುದೇ ದಾಖಲೆ ಇಲ್ಲ ಎಂದು ಹೇಳಿರುತ್ತಾರೆ ಆಗ ಪಂಚರ ಸಮಕ್ಷಮ 13.40 ರಿನಂ 15.30 ಗಂಟೆಯವರಿರೆಗೆ ಪಂಚರು ಹಾಗೂ ಪಂಚಾಯಿತ ಸಿಬ್ಬಂದಿ ಎಲೆಕ್ಟ್ರಿಕ ತೋಟದ ಮಷಿನನ್ನು ತೆಗೆದುಕೊಂಡು ಸದರಿ ಚೀಲಗಳನ್ನು ಬೇರೆ ಬರೇಗೆ ಮಾಡಿ ತೂಕ ಮಾಡಿ ಚಾಸಾ.1 ಮತ್ತು ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿ ಪ್ರತಿ ಚೀಲದಲ್ಲಿ ತಲಾ 2 ಕೆ ಜಿ ಮಾದರಿಯಾಗಿ

ಸಿಸಿ ನಂಃ 4102/2023

ಸಿ.ಡಬ್ಲೂ 6

ಪಿ.ಡಬ್ಲೂ 5

ತೆಗೆದುಕೊಂಡಿದ್ದು ನಂತರ ಪಂಚನಾಮೆ ಮಾಡಿ ಚಾಸಾ.1 ರವರು ಈ ಬಗ್ಗೆ ದೂರನ್ನು ಕೊಟ್ಟಿರುತ್ತಾರೆ. ಈ ವಿಚರಾವನ್ನು ತನಿಖಾಧಿಯರಿಗೆ ಹೇಳಿರುತ್ತೇವೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ನಾವು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಅದರ ಬಗ್ಗೆ ಡೈರಿಯಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿ ಅದೇ ರೀತಿ ಮಾಹಿತಿಯನ್ನು ಸಹ ಸಂಕ್ಷಿಪ್ತವಾಗಿ ಬರೆಯವುಬೇಕು ಎಂದರೆ ಸರಿ ಮತ್ತು ನಮ್ಮ ಮೇಲಾಧಿಕಾರಿಗಳು ನಮಗಗೆ ನೇಮಕ ಮಾಡಿದ ಬಗ್ಗೆ ಬರೆಯುತ್ತಾರೆ. ಎಂದರೆ ಸರಿ. ಅದೇ ತರ ನಾವು ಕರ್ತವ್ಯದ ನಂತರ ಅದರ ಸಂಕ್ಷಿಪ್ತವನ್ನು ಬರೆಯಬೇಕು ಎಂದರೆ ಸರಿ. ನುಗ್ಗಿಕೇರಿ ಗ್ರಾಮ ಪೋಲಿಸರ ಕಮಿಷನರವರ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿಯಲ್ಲ . ಎರಿಕೊಪ್ಪ ಗ್ರಾಮ ನಮ್ಮ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಎರಿಕೊಪ್ಪ ಟೋಲ ಗೇಟ ಹತ್ತಿರ ಯಾವಾಗಲೂ ಪೊಲಿಸ ಸಿಬ್ಬಂದ ಇರುತ್ತಾರೆ ಎಂದರೆ ಸರಿ. ಅಲ್ಲಿ ಸಿಸಿಟಿವಿ ಕ್ಯಾಮೆರಾ ಇರುತ್ತವೆ ಎಂದರೇ ಸರಿ. ಆಗ ನಾವು ಪೋಲಿಸ ಪಂಚರಿಗೆ ಲಿಖಿತ ನೋಟಿಸ್ಸ ಕೊಟ್ಟಿಲ್ಲ. ಚಾಸಾ.1 ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ. ಚಾಸಾ.10 ರವರು ತನಿಖೆ ಮಾಡಿದ್ದಾರೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಪಂಚರ ಹೆಸರು ಬರೆದಿಲ್ಲ ಎಂದರೆ ಸರಿ. ಅದೇ ರೀತಿ ಪಂಚರನಾಮೆ ಯಾರು

ಬರೆದರು ಎಲ್ಲಿ ಬರೆದರು ನಮೂದು ಇಕಲ್ಲ ಎಂದರೆ ಸರಿ. ಸಾಮಾನ್ಯವಾಗಿ ಪಂಚಯಿತಿಯಲ್ಲಿ ಪಿಡಿಓ ಹಾಗೂ ಇತರೇ ಸಿಬ್ಬಂದಿ ಮತ್ತು ಅಂಗನವಾಡಿಯಲ್ಲಿ ಕಾರ್ಯಕರ್ತೆಯರು ಇರುತ್ತಾರೆ ಎಂದರೆ ಸರಿ. ಪಂಚನಾಮೆಗೆ ಸದರಿಯವರು ಸಹಿ ಪಡೆದುಕೊಂಡಿಲ್ಲ. ನುಗ್ಗಿಕೇರಿಯಿಂದ ಎರಿಕೊಪ್ಪ ಹಾಗೂ ಕಲಘಟಗಿ ವರೆಗೆ ಬತ್ತ ಬೆಳೆಯುತ್ತಾರೆ ಎಂದರೆ ಸರಿ. ಪಡಿತರ ಅಕ್ಕಿ ಅಥವಾ ಸಾಮಾನ್ಯ ಅಕ್ಕಿ ಬಗ್ಗೆ ನಮಗೆ ಯಾವುದೇ ವಿಶೇಷ ತರಗತಿ ಕೊಟ್ಟಿಲ್ಲ ಎಂದರೆ ಸರಿ. ಆ ದಿನ ನಾವು ಸರ್ಚ ವಾರನಟ ಪಡೆದಿಲ್ಲ ಎಂದರೆ ಸರಿ. ಆದರೆ ನಾವು ಎರಿಕೊಪ್ಪ ಟೋಲ ಗೇಟ ನೋಡಿಲ್ಲ ಅಲ್ಲಿ ಯಾವುದೇ ಆಟೋ ಬಂದಿಲ್ಲ ಎಂದರೇ ಸರಿಯಲ್ಲ. ಅದೇ ರೀತಿ ಸದರಿ ಆಟೋ ಎರಿಕೊಪ್ಪ ಗ್ರಾಮದ ಕಡೇಗೆ ಹೊಲೇಗಿಲ್ಲ ನಾವು ಅವರನ್ನು ಬೆನ್ನು ಹತ್ತಿ ಹಿಡಿದಿಲ್ಲ ವ್ಧರೆ ಸರಿಯಲ್ಲ. ಅದೇ ರೀತಿ ಆ ಆಟೋದಲ್ಲಿ ಪಡಿತರ ಅಕ್ಕಿ ಇರಲಿಲ್ಲ ಮತ್ತು ನಾವು ಅದನ್ನು ಜಪ್ತ ಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಅಕ್ಕಿಯನ್ನು ಕಳ್ಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಎಂದು ಹಾಗೂ 2 ನೇ ಆರೋಪಿ ಗೊಡಾವನಗೇ ತೆಗೆದುಕೊಂಡು ಹೋಗುತ್ತಿದಾದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. . ಅದೇ ರೀತಿ ಸದರಿ ಆಟೋ ದಲ್ಲಿ 5 ಚೀಲದಲ್ಲಿ ತಲಾ 2 ಕೆ ಜಿ ಮಾರದರಿ ತೆಗೆದುಕೊಂಡು ಹೋಗುತ್ತಿರ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂ◌ೇ ರೀತಿ ನನ್ನ ಸಮಕ್ಷಮ ಜಪ್ತು ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ತೆಗೆದುಕೊಂಡ

ಸಿಸಿ ನಂಃ 4102/2023

ಸಿ.ಡಬ್ಲೂ 6

ಪಿ.ಡಬ್ಲೂ 5

ಹೋದ ವಾಹನದ ವಿವರಣೆಯನ್ನು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.್ಣ ಆರೋಪಿಗೂ ಜಪ್ತು ಪಡಿಸಿದಅಕ್ಕಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ.1 ರವರು ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆ ಕೊಡದಿದ್ದರು ಸಹ ಅವರೇ ಅದನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿದ್ದಾರೆ ಎಂದರ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.

ಸಿಸಿ ನಂಃ 4102/2023

ಸಿ.ಡಬ್ಲೂ 6

ಪಿ.ಡಬ್ಲೂ 5